# ನವಿಲುಗನ್ನಡಿ

- ಸಪ್ಟೆಂಬರ್ ಸಂಚಿಕೆಯಲ್ಲಿ ಹಿಂದಿಯ ಪ್ರಸಿದ್ಧ ಕವಿ ಅರುಣ್ ಕಮಲ್ ಅವರ ಜತೆಗಿನ 'ಮಾತುಕತೆ' (ಸಂದರ್ಶನ: ವಿಕ್ರಮ ವಿಸಾಜಿ) ನಮ್ಮೆಲ್ಲರ ಮಾತನ್ನೇ ನಿಲ್ಲಿಸುವಂತಿದೆ. ಕವಿತೆ ಎಂದರೆ ದುಷ್ಟ ಶಕ್ತಿಗಳಿಗೆ ಕೊಡುವ ಶಾಪ ಎಂಬುದನ್ನು ಮನಗಾಣಿಸಲು ಅರುಣ್ ಅವರ 'ಥೂಕ್' ಕವಿತೆಯೊಂದೇ ಸಾಕು. ಕಾವ್ಯದ ನಂಬಿಕೆಯ ಬಗ್ಗೆ ಹೇಳುತ್ತಲೇ ಬೆವರಿನ ಕಂಪು, ತೃಣವೆನಿಸಿಕೊಂಡ ವಸ್ತುವೂ ಮಹಾನ್ ತತ್ವವನ್ನು ಸಾರಬಹುದು ಎಂಬ ಸತ್ಯವನ್ನು ಕವಿ ಬಿಚ್ಚಿಟ್ಟಿದ್ದಾರೆ. ಒಟ್ಟಾರೆ ಈ ಸಂದರ್ಶನದ ಓದು ಹಿತವೆನಿಸಿತು.

**ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ**


- ಈ ತಿಂಗಳ ಮಯೂರ ಮುಖಪುಟ ಮನಸ್ಸಿಗೆ ಆನಂದ ನೀಡಿತು. ಕೃಷ್ಣಮೂರ್ತಿ ಹನೂರು ಅವರ 'ಹರಿಶ್ಚಂದ್ರ ಕಾವ್ಯ ಮತ್ತು ಹಾರ್ವರ್ಡ್' ಲೇಖನ, ರಮಾ ವೈದ್ಯನಾಥನ್ ಅವರ ಸಂದರ್ಶನ, ನಂದಾ ದೀಪದಲ್ಲಿ ಕಮಲಾ ಹಂಪನಾ ಸ್ಮರಣೆ, ಒಂದು ಸೊಳ್ಳೆಯ ಸ್ವಗತ ಲಲಿತ ಪ್ರಬಂಧ ಮತ್ತೆಮತ್ತೆ ಓದಿಸಿಕೊಂಡವು.

**ಸುಮನಾ, ಬೆಂಗಳೂರು**

- ಕಡಿದಾಳ್ ಪ್ರಕಾಶ್ ಅವರ 'ವಾತ್ಸಲ್ಯ ಪಥ' ಮನಮುಟ್ಟುವಂತಿದೆ. ಕಮಲಾ ಹಂಪನಾ ಅವರ ಶಿಸ್ತು, ಸಂಯಮ, ಸಮಯಪ್ರಜ್ಞೆ ಮತ್ತು ಸಭಾಗೌರವವನ್ನು ಮೂಡಬಿದಿರೆಯ ಅವರ ಅಧ್ಯಕ್ಷತೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಂಡವ ನಾನು. ಕಮಲಾ ಅವರ ಅಧ್ಯಕ್ಷೀಯ ನುಡಿಗಳು, ಈ ಲೇಖನ ಓದಿದಾಗ ನನ್ನ ನೆನಪಿನಲ್ಲಿ ಅನುರಣಿಸಿದವು.

**ಕೊಹಿಮ, ಬಸರಕೋಡು**

- 'ಕಾವ್ಯ ಸಂಕ' ಅಂಕಣದಲ್ಲಿ ಆರಿಫ್ ರಾಜಾ ಅವರು ವಿವಿಧ ದೇಶಗಳ ಕವಯಿತ್ರಿಯರೊಂದಿಗೆ ನಡೆಸುವ ಸಂದರ್ಶನ ಅಪೂರ್ವವಾದದ್ದು. ಕವಿತ್ವದ ಯುವ ಮನಸ್ಸುಗಳಿಗೆ ದೇಶ–ಭಾಷೆ–ಗಡಿಗಳ ಎಲ್ಲೆ ಇರದೆ ಬಹುತೇಕ ಎಲ್ಲಾ ಕವಿ ಹೃದಯಗಳೂ ಮಾನವೀಯತೆ, ಪ್ರೀತಿಗಾಗಿಯೇ ಹಂಬಲಿಸುವ ಮತ್ತು ಮಿಡಿಯುವ ಪರಿ ಅಚ್ಚರಿ ಹುಟ್ಟಿಸುತ್ತದೆ. ನಿಜಕ್ಕೂ ಇದು ಮಾನವ ಹೃದಯದ ಸಂಕವೇ ಸರಿ. ಅಂಕಣಕಾರರ ಪರಿಶ್ರಮ, ಮಯೂರದ ಹೃದಯವಂತಿಕೆ ಮತ್ತು ಬದ್ಧತೆ ಶ್ಲಾಘನೀಯ.




**ಚನ್ನಬಸವ ಪುತ್ತೂರ್ಕರ, ಉಡುಪಿ**

- ಎಂ.ಎಸ್. ಶ್ರೀರಾಮ್ ಅವರು ಬರೆಯುವ 'ಪಠಣ ಕುತೂಹಲ' ಅಂಕಣ ನಮ್ಮ ಓದಿಗೆ ಕೈಕಂಬ ಇದ್ದಂತೆ. ಅವರು ಬರೆಯುವ ವಿಮರ್ಶಾತ್ಮಕವಾದ ಪುಸ್ತಕ ಪರಿಚಯ ತುಂಬಾ ಮಹತ್ವದ್ದು. ತಪ ಸದೃಶವಾದ ಕೆಲಸವನ್ನು ಒಬ್ಬ ಆದರ್ಶ ಗುರುವಿನಂತೆ ಮಾಡುತ್ತಿರುವ ಶ್ರೀರಾಮ್ ಅವರಿಗೂ, ಅವರ ಬರಹಗಳನ್ನು ಓದಲು ಅವಕಾಶ ಮಾಡಿಕೊಡುವ ಮಯೂರಕ್ಕೂ ಅಭಿನಂದನೆಗಳು.

**ಶ್ರೀನಿವಾಸ ದೇಶಪಾಂಡೆ, ಮಂಗಳೂರು**

- ಶಿವರಾಮ ಕಾರಂತರ ಕಾದಂಬರಿ 'ಮರಳಿ ಮಣ್ಣಿಗೆ'ಯ ಪಾರೋತಿಯ ಬಗ್ಗೆ 'ಚಿತ್ತ ಕೆತ್ತಿದ ಚಿತ್ರ' ಅಂಕಣದಲ್ಲಿ ಜಯಶ್ರೀ ಕದ್ರಿ ಬರೆದ ಮಾತುಗಳು ನನ್ನವೂ ಸಹ. ಆ ಕಾದಂಬರಿಯನ್ನು ಓದಿದಾಗ ನನ್ನನ್ನೂ ಆ ಪಾತ್ರ ಕಾಡಿತ್ತು. ಆ ಕಾಲದ ಹೆಣ್ಣುಮಕ್ಕಳ ಬದುಕು, ಅವರಿಗಾಗುವ ಅನ್ಯಾಯ ಕಣ್ಣೀರು ತರಿಸುತ್ತದೆ.

**ಸುಶೀಲಾ ದೇವಿ ಆರ್. ರಾವ್, ದಾವಣಗೆರೆ**